ಓ.ಎಸ್. ನಂ. 13/2022
ಪಿ.ಡಬ್ಲ್ಯೂ- 1

(ಇಂದು ದಿಃ 02-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- 1** ರಿಂದ **4** ನೇ ಪ್ರತಿವಾದಿ ಪರ ಶ್ರೀ.**H.L.A** ವಕೀಲರಿಂದ **:-**

1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು. 1 ನೇ ಪ್ರತಿವಾದಿಯ ತಾಯಿ ಹೆಸರು ಬಸಮ್ಮ. ಬಸಮ್ಮನ ತಾಯಿ ಹೆಸರು ನನಗೆ ಗೊತ್ತಿಲ್ಲ. ನನ್ನ ಗಂಡ ತೀರಿಹೋಗಿ 2 ವರ್ಷಕ್ಕಿಂತ ಹೆಚ್ಚಾಗಿದೆ. ನನ್ನ ಗಂಡ ತೀರಿಹೋದ ನಂತರ ನಾನು 1 ನೇ ಪ್ರತಿವಾದಿ ಕಟ್ಟಿಸಿದ 2 ಕೋಣೆಯ ಮನೆಯಲ್ಲಿದ್ದೇ ಎಂದರೆ ಸರಿಯಲ್ಲ. ನಾನು ಈಗ ತವರು ಮನೆಯಲ್ಲಿ ವಾಸ ಇದ್ದೇನೆ. ನನ್ನ ಅತ್ತೆ ನನ್ನ ಜೊತೆ ವಾಸ ಇದ್ದಾಳೆ. 1 ನೆ ಪ್ರತಿವಾದಿ ನನಗೆ 2 ಪ್ಲಾಟ ಕೊಟ್ಟಿದ್ದು ಅದರಲ್ಲಿ ಮನೆ ಕಟ್ಟಿ ಕೊಟ್ಟಿದ್ದು ನಾನು ಅದರಲ್ಲಿಯೇ ವಾಸ ಇದ್ದೇ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಹೋದಾಗಿನಿಂದ ನಾನು ತವರು ಮನೆಯಲ್ಲಿ ವಾಸ ಇದ್ದೇನೆ. ನನ್ನ ಗಂಡ ಬದುಕಿದ್ದಾಗ 1 ನೇ ಪ್ರತಿವಾದಿ 2 ಪ್ಲಾಟ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. 2 ಪ್ಲಾಟಗಳನ್ನು ಕೊಡಿಸಿದ್ದರು ಕೂಡ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು 1 ನೇ ಪ್ರತಿವಾದಿ ತಂದೆಯಿಂದ ಬಂದ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳು 1 ನೇ ಪ್ರತಿವಾದಿಯ ತಾಯಿ ಬಸಮ್ಮ ರವರ ತಾಯಿ ಕಡೆಯಿಂದ 1 ನೇ ಪ್ರತಿವಾದಿಗೆ ಬಂದಿವೆ ಎಂದರೆ ಸರಿಯಲ್ಲ. ದಾವಾ ಜಮೀನುಗಳ ಹಳೆ ಪಹಣಿಗಳಲ್ಲಿ 1 ನೇ ಪ್ರತಿವಾದಿಯ ತಾಯಿ ಮತ್ತು ಅಜ್ಜಿಯ ಹೆಸರುಗಳು ಇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಾಯಿಯ ತಂದೆಯ ಹೆಸರು ತಿಪ್ಪಣ್ಣ ಚೋರಗಸ್ತಿ ಎಂದರೆ ಸರಿ. ದಾವಾ ಜಮೀನುಗಳ ಪಹಣಿಗಳಲ್ಲಿ ತಿಪ್ಪಣ್ಣ ಚೋರಗಸ್ತಿ ರವರ ಹೆಸರುಗಳು ಇದ್ದರು ಕೂಡ ದಾವಾ ಜಮೀನುಗಳು 1 ನೇ ಪ್ರತಿವಾದಿಯ ತಂದೆಯಿಂದ ಬಂದ ಸ್ವತ್ತಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದವಾ ಐಟಂ ನಂ.5:- 1 ನೇ ಪ್ರತಿವಾದಿಯ ತಾಯಿಯ ತಂದೆ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ.

ಹಳೆ ಪಹಣಿಗಳನ್ನು ಹಾಜರುಪಡಿಸಿದರೆ ಸತ್ಯಗೊತ್ತಾಗುತ್ತದೆ ಎಂಬ ಕಾರಣಕ್ಕೆ ನಾನು ಕೇವಲ ಹೊಸ ಪಹಣಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಿಗೆ ಮಾಡಿರುವ 2 ಪ್ಲಾಟಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಬದುಕಿದ್ದಾಗ 1 ನೇ

ಪ್ರತಿವಾದಿ ನನ್ನ ಗಂಡನಿಗೆ ಒಂದು ಚಿಕ್ಕ ಪೆಟ್ಟಿಗೆ ಅಂಗಡಿ ಇಟ್ಟು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಪೆಟ್ಟಿಗೆ ಅಂಗಡಿ ನಡೆಸುತ್ತಿದ್ದ ಸಾಕ್ಷಿ ಮುಂದುವರೆದು ಅದನ್ನು ಸ್ವತಃ ನಾವೇ ಹಾಕಿದ್ದೇವು ಎಂದು ಹೇಳುತ್ತಾರೆ. ನನ್ನ ಗಂಡ ಮಧ್ಯಪಾಸ ವೇಸನೆಯಾಗಿದ್ದ ಅದರಿಂದಾಗಿ ಆರೋಗ್ಯ ಹದಗೆಟ್ಟು ತೀರುಹೋಗಿದ್ದಾರೆ. ನನ್ನ ಗಂಡನನ್ನು ಆಸ್ಪತ್ರೆಗೆ ನಾನು ತೋರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಆಸ್ಪತ್ರೆ ವ್ಯಚ್ಚವನ್ನು ಸಾಲ ಮಾಡಿ 1 ನೇ ಪ್ರತಿವಾದಿ ಭರ್ತಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಅತ್ತೆ ಭೀಮವ್ವ 1 ನೇ ಪ್ರತಿವಾದಿ ಕಟ್ಟಿಸಿಕೊಟ್ಟಿರುವ 2 ಕೋಣೆಯ ಮನೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ನನ್ನ ಮದುವೆಗೆ 1 ನೇ ಪ್ರತಿವಾದಿ ಸಾಕಷ್ಟು ಸಾಲ ಮಾಡಿದ್ದರು ಅದನ್ನು ತೀರಿಸುವ ಸಲುವಾಗಿ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದೂವರೆದ ಪಾಟಿ ಸವಾಲಿಗೆ ಮೂಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.